KACD220044472025

Presented on : 16-12-2025
Registered on : 16-12-2025
Decided on : 02-04-2026
Duration : 16D-03M-00Y

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಳ್ಳಕೆರೆ.

ಉಪಸ್ಥಿತರುಃ ಶ್ರೀಮತಿ ಹೇಮಾ ಹೆಚ್.ಆರ್.,
ಬಿ.ಎ. ಎಲ್, ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

ದಿನಾಂಕ 02 ನೇ ಏಪ್ರಿಲ್ 2026

**ಸಿ.ಸಿ.ನಂ.2422/2025**

ಪಿರ್ಯಾದಿದಾರರುಃ

ಸರ್ಕಾರದ ಪರವಾಗಿ ಚಳ್ಳಕೆರೆ ಪೊಲೀಸ್.

(ಸಹಾಯ ಸರ್ಕಾರಿ ಅಭಿಯೋಜಕರು)

–ವಿರುದ್ಧ –

ಆರೋಪಿತರು ಃ–

1. ಮೊಹಮ್ಮದ್ ಶರೀಫ್ ಬಿನ್ ಪೀರನ್ ಸಾಬ್,
ಸು.೩೫ ವರ್ಷ, ಉರ್ದು ಶಾಲೆಯ ಹಿಂದೆ,
ಆಜಾದ್‌ನಗರ, ಹಿರಿಯೂರು ಪಟ್ಟಣ, ಚಿತ್ರದುರ್ಗ.

(ಶ್ರೀಮತಿ ಬಿ.ಗೀತಾಂಜಲಿ, ವಕೀಲರು)

| | | |
|---|---|---|
| 1. ಅಪರಾಧ ಜರುಗಿದ ದಿನಾಂಕ | ಃ | 02.07.2025 |
| 2. ಅಪರಾಧವನ್ನು ವರದಿ ಮಾಡಿದ ದಿನಾಂಕ | ಃ | 17.08.2025 |
| 3. ಆರೋಪಿತರನ್ನು ಬಂಧಿಸಿದ ದಿನಾಂಕ | ಃ | 05.10.2025 |

| | | |
|---|---|---|
| 4. ಫಿರ್ಯಾದುದಾರರ ಹೆಸರು | : | ಸಿರಿಯಣ್ಣ ಎನ್. |
| 5. ವಿಚಾರಣೆ ಪ್ರಾರಂಭವಾದ ದಿನಾಂಕ | : | 21.01.2026 |
| 6. ವಿಚಾರಣೆ ಮುಕ್ತಾಯವಾದ ದಿನಾಂಕ | : | 18.02.2026 |
| 7. ಆಪಾದನೆಗಳು | : | ಭಾರತೀಯ ನ್ಯಾಯ ಸಂಹಿತೆ ಕಲಂ 303(2) |
| 8. ನ್ಯಾಯಾಧೀಶರ ಅಭಿಪ್ರಾಯ | : | ನಿರ್ದೋಷಿ ಎಂದು ಪರಿಗಣಿಸಿದೆ. |

## ತೀರ್ಪು

ಚಳ್ಳಕೆರೆ ಪೊಲೀಸ್ ಠಾಣೆಯ ಉಪನಿರೀಕ್ಷಕರು ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ–

2. ದಿನಾಂಕ ೦೧.೦೭.೨೦೨೫ ರಂದು ಬೆಳಿಗ್ಗೆ ೬.೦೦ ಗಂಟೆ ಸಮಯದಲ್ಲಿ ಚಾಸಾ.೧ ರವರು ಚಳ್ಳಕೆರೆ ಪಟ್ಟಣದ ತ್ಯಾಗರಾಜನಗರದಿಂದ ಕೆ.೧೬/ಈ.ಕೆ.೭೬೯೦ ನೇ ಮೋಟಾರ್ ಸೈಕಲ್‌ನಲ್ಲಿ ಹೊರಟು ಸುಮಾರು ೬.೧೫ ಗಂಟೆ ಸಮಯದಲ್ಲಿ ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಮೋಟಾರ್ ಸೈಕಲ್‌ನ್ನು ನಿಲ್ಲಿಸಿ, ನಂತರ ರೇಣುಕಾಪುರಕ್ಕೆ ಹೋಗಿ, ನಂತರ ದಿನಾಂಕ ೦೨.೦೭.೨೦೨೫ ರಂದು ಚಳ್ಳಕೆರೆಗೆ ವಾಪಾಸ್ ಬಂದು, ಚಳ್ಳಕೆರೆ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಬಳಿ ಸುಮಾರು ೯.೦೦ ಗಂಟೆಗೆ ಬಂದು ನೋಡಿದಾಗ, ಕೆಎ.೧೬/ಈ.ಕೆ.೭೬೯೦ ನೇ ಮೋಟಾರ್ ಸೈಕಲ್ ಇರಲಿಲ್ಲ. ನಂತರ  ನಗರದ ವಿವಿದ ಕಡೆ ಹುಡುಕಾಡಿದರೂ ಸಿಗಲಿಲ್ಲ. ಅದೇ ದಿನ ಮದ್ಯಾಹ್ನ ೨.೦೦ ಗಂಟೆ ಸಮಯದಲ್ಲಿ ಆರೋಪಿಯು ಸದರಿ ಮೋಟಾರ್ ಸೈಕಲ್‌ನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ. ಆ ಮೂಲಕ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ.

3. ಆ ಬಗ್ಗೆ ದಿನಾಂಕ:೧೭.೦೮.೨೦೨೫ ರಂದು ಚಾಸಾ.೧ ರವರು ಚಾಸಾ–೪೩ ರವರಿಗೆ ದೂರನ್ನು ನೀಡಿರುತ್ತಾರೆ. ಚಾಸಾ–೪೩ ರವರು ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ:೩೭೭/೨೦೨೫ ನ್ನು ದಾಖಲಿಸಿರುತ್ತಾರೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ರವರಿಗೆ ಹಾಗೂ ತಮ್ಮ ಮೇಲಾಧಿಕಾರಿಗಳಿಗೆ ನಿವೇದಿಸಿ ಕೊಂಡಿರುತ್ತಾರೆ. ತನಿಖಾಧಿಕಾರಿಗಳು ಸದರಿ ದೂರಿನ ಅನ್ವಯ ತನಿಖಾ ಕಾರ್ಯ ಪೂರ್ಣಗೊಳಿಸಿ,

ಆರೋಪಿಯ ವಿರುದ್ಧ ಮೇಲೆ ತಿಳಿಸಿದ ಅಪರಾಧಗಳಿಗೆ ನ್ಯಾಯಿಕ ದೋಷರೋಪಣಾಪಟ್ಟಿ ಸಲ್ಲಿಸಿದ್ದು, ನ್ಯಾಯಾಲಯವು ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

4. ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿದ ನಂತರ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ದಿನಾಂಕ ೧೩.೧೦.೨೦೨೫ ರ ಆದೇಶದಂತೆ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶವಾಗಿದ್ದರೂ ಸಹ ಆರೋಪಿಯು ಸೂಕ್ತ ಜಾಮೀನನ್ನು ಒದಗಿಸದ ಕಾರಣ ಅವರನ್ನು ನ್ಯಾಯಾಂಗ ಬಂಧನದಲ್ಲಿಡಲಾಗಿರುತ್ತದೆ. ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ.೨೩೦ ರ ಪ್ರಕಾರ ಆರೋಪಿತರಿಗೆ ಈ ಪ್ರಕರಣದ ಅಂತಿಮ ವರದಿ ಮತ್ತು ಅದರ ಜೊತೆ ಲಗತ್ತಿಸಿದ ದಾಖಲುಗಳನ್ನು ವಿತರಿಸಲಾಯಿತು. ಆರೋಪಿತರ ಪರ ವಕೀಲರು ಮತ್ತು ಸ.ಸ.ಅ. ರವರ ವಾದವನ್ನು ಆಲಿಸಿದ ನಂತರ ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ದೋಷಾರೋಪಣೆಯನ್ನು ಸಿದ್ದಪಡಿಸಿ ಆರೋಪಿತರಿಗೆ ಓದಿ ಹೇಳಿ ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪಣೆಗಳನ್ನು ರುಜುವಾತು ಪಡಿಸುವ ಸಲುವಾಗಿ ಒಟ್ಟು ೭ ಸಾಕ್ಷಿದಾರರನ್ನು ಪ್ರಾಸಾ-೧ ರಿಂದ ೭ ರಂತೆ ವಿಚಾರಣೆಗೊಳಪಡಿಸಿ ನಿಪಿ-೧ ರಿಂದ ೧೧ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ಆರೋಪಿತರಿಗೆ ವ್ಯತಿರಿಕ್ತವಾದ ಸಾಕ್ಷ್ಯಗಳು ಇರುವ ಕಾರಣ, ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ ೩೫೧ ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ಮಾಡಿದ್ದು, ಅದರಲ್ಲಿ ಆರೋಪಿತರು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿತರ ವಿರುದ್ದವಾಗಿ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರ ಸಾಕ್ಷ್ಯ ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

6. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

7. ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

(೧) ದಿನಾಂಕ ೦೨.೦೬.೨೦೨೫ ರಂದು ಮಧ್ಯಾಹ್ನ ೨.೦೦ ಗಂಟೆ ಸಮಯದಲ್ಲಿ ಚಳ್ಳಕೆರೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಳ್ಳಕೆರೆ ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಆರೋಪಿಯು ಚಾಸಾ.೧ ರವರ ಕೆಎ.೧೬/ಈ.ಕೆ.೭೬೯೦ ನೇ ಮೋಟಾರ್ ಸೈಕಲ್‌ನ್ನು ಕಳವು ಮಾಡಿದ್ದರಿಂದ, ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ ೩೦೩(೨) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(೨) ಯಾವ ಆದೇಶ?

**8.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯ ಈ ಕೆಳಕಂಡಂತೆ ಉತ್ತರಿಸುತ್ತದೆ:–

ಅಂಶ ನಂ.೧ : ನಕಾರಾತ್ಮಕವಾಗಿ,

ಅಂಶ ನಂ.೨ : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

ಕಾರಣಗಳು

9. ಅಂಶ ನಂ.೧ – ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಮಾಡಲಾದ ಆಪಾದನೆಗಳನ್ನು ನಿರೂಪಿಸಲು ಅಭಿಯೋಜನಾ ಪಕ್ಷದವರು ದೂರುದಾರರಾದ ಚಾಸಾ.೧ ರವರನ್ನು ಪ್ರಾಸಾ.೧ ಎಂದು, ಮಹಜರ್ ಸಾಕ್ಷಿದಾರರಾದ ಚಾಸಾ.೩, ೪ ಮತ್ತು ೫ ರವರನ್ನು ಕ್ರಮವಾಗಿ ಪ್ರಾಸಾ.೨ ರಿಂದ ೪ ಎಂದು, ತನಿಖಾಧಿಕಾರಿಯಾದ ಚಾಸಾ.೪೩ ರವರನ್ನು ಪ್ರಾಸಾ.೫ ಎಂದು, ಪೋಲೀಸ್ ಸಿಬ್ಬಂಧಿಯಾದ ಚಾಸಾ.೪೦ ರವರನ್ನು ಪ್ರಾಸಾ.೬ ಎಂದು, ತನಿಖಾಧಿಕಾರಿಯಾದ ಚಾಸಾ.೪೫ ರವರನ್ನು ಪ್ರಾಸಾ.೭ ಎಂದು ವಿಚಾರಣೆಗೊಳಪಡಿಸಿರುತ್ತಾರೆ.

10. ಈ ಪ್ರಕರಣದಲ್ಲಿ ದೂರುದಾರರಾದ ಪ್ರಾಸಾ.೧ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೧.೦೬.೨೦೨೫ ರಂದು ಬೆಳಿಗ್ಗೆ ೬.೧೫ ಗಂಟೆಗೆ ಕೆಎ.೧೬/ ಇ.ಕೆ.೭೬೯೦ ನೇ ಮೋಟಾರ್ ಸೈಕಲ್‌ನ್ನು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯ ಮುಂದೆ ನಿಲ್ಲಿಸಿ, ರೇಣುಕಾಪುರಕ್ಕೆ ಹೋಗಿ, ಮಾರನೇ ದಿನ ಬೆಳೀಗ್ಗೆ ೮.೦೦ ಗಂಟೆಗೆ ಚಳ್ಳಕೆರೆ ಬಂದು ಸರ್ಕಾರಿ ಆಸ್ಪತ್ರೆ ಬಳಿ ನೋಡಿದಾಗ ಬೈಕ್ ಇರಲಿಲ್ಲ, ಸುತ್ತಮುತ್ತ ಹುಡುಕಾಡಿದರೂ ಎಲ್ಲಿಯೂ ಬೈಕ್ ಕಂಡುಬರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಆ ಬಗ್ಗೆ ದೂರು ಸಲ್ಲಿಸಿದ್ದು, ಪೋಲಿಸರು ಸ್ಥಳ ಪರಿಶೀಲನೆ ಮಾಡಿ ಮಹಜರ್ ಜರುಗಿಸಿದ್ದು, ಮೂರು ತಿಂಗಳ ನಂತರ ಪೋಲೀಸರು ದೂರವಾಣಿ ಕರೆ ಮಾಡಿ ಬೀರೂರಿನಲ್ಲಿ ಬೈಕ್ ಸಿಕ್ಕಿರುವ ವಿಚಾರ ತಿಳಿಸಿದ್ದು, ಠಾಣೆಗೆ ಹೋದಾಗ ಪೋಲೀಸರು ಬೈಕನ್ನು ಹಿರಿಯೂರು ತಾಲ್ಲೂಕಿನ ಆಜಾದ್ ನಗರದ ವ್ಯಕ್ತಿಯು ಕಳ್ಳತನ

ಮಾಡಿರುತ್ತಾನೆ ಎಂದು ತಿಳಿಸಿದ್ದು, ಕಳ್ಳತನ ಮಾಡಿದ ವ್ಯಕ್ತಿಯನ್ನು ಸಿಸಿ ಕ್ಯಾಮೆರಾದ ವಿಡೀಯೋದಲ್ಲಿ ಹಾಗೂ ಠಾಣೆಯಲ್ಲಿ ನೋಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸಾಕ್ಷಿಯು ದಿನಾಂಕ ೦೫.೧೦.೨೦೨೫ ರಂದು ತನ್ನನ್ನು ಠಾಣೆಗೆ ಕರೆಸಿ, ಆರೋಪಿಯನ್ನು ಮತ್ತು ಬೈಕನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ.

11. ಮಹಜರ್ ಸಾಕ್ಷಿದಾರರಾದ ಪ್ರಾಸಾ.೨ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೧೮.೦೮.೨೦೨೫ ರಂದು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯ ಬಳಿ ಬೈಕ್ ಕಳ್ಳತನವಾದ ವಿಚಾರವಾಗಿ ಮದ್ಯಾಹ್ನ ೨.೩೦ ರಿಂದ ೩.೦೦ ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ.

12. ಮಹಜರ್ ಸಾಕ್ಷಿದಾರರಾದ ಪ್ರಾಸಾ.೩ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೫.೧೦.೨೦೨೫ ರಂದು ಪೋಲೀಸ್‌ರು ಆರೋಪಿಯ ವಶದಿಂದ ಪ್ಯಾಷನ್ ಪ್ರೋ ಬೈಕನ್ನು ಜಪ್ತುಪಡಿಸಿಕೊಂಡು, ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಅದೇ ದಿನ ತಾನು, ಆರೋಪಿ ಮತ್ತು ಪೋಲೀಸರು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯ ಬಳಿ ಹೋಗಿದ್ದು, ಆರೋಪಿಯು ಕಳ್ಳತನ ಮಾಡಿದ ಜಾಗವನ್ನು ತೋರಿಸಿದ ಮೇರೆಗೆ ಪೋಲಿಸರು ಮದ್ಯಾಹ್ನ ೨.೩೦ ರಿಂದ ೩.೧೫ ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾಋುಎ ಎಂದು ನುಡಿಯುತ್ತಾರೆ.

13. ಮಹಜರ್ ಸಾಕ್ಷಿದಾರರಾದ ಪ್ರಾಸಾ.೪ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೫.೧೦.೨೦೨೫ ರಂದು ಪೋಲಿಸರು ಆರೋಪಿಯ ವಶದಿಂದ ಸ್ಪ್ಲೆಂಡರ್ ಬೈಕನ್ನು ಜಪ್ತುಪಡಿಸಿಕೊಂಡು ಮದ್ಯಾಹ್ನ ೧.೧೫ ರಿಂದ ೧.೪೫ ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ.

14. ತನಿಖಾಧಿಕಾರಿಯಾದ ಪ್ರಾಸಾ.೫ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೧೭.೦೮.೨೦೨೫ ರಂದು ಚಾಸಾ.೧ ರವರಿಂದ ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿ, ದಿನಾಂಕ ೧೮.೦೮.೨೦೨೫ ರಂದು ಮದ್ಯಾಹ್ನ ೨.೩೦ ರಿಂಧ ೩.೧೫ ರವರೆಗೆ ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುವುದಾಗಿ ನುಡಿಯುತ್ತಾರೆ.

15. ಪೋಲೀಸ್ ಸಿಬ್ಬಂದಿಯಾದ ಪ್ರಾಸಾ.೬ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೪.೧೦.೨೦೨೫ ರಂದು ನೆಹರು ವೃತ್ತದಿಂದ ರಹೀಂ ನಗರ, ರಹೀಂ ನಗರದಿಂದ ನಾಯಕನಹಟ್ಟಿ ಕ್ರಾಸ್‌ನಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ, ಮೋಟಾರ್ ಸೈಕಲ್‌ನಲ್ಲಿದ್ದ ಒಬ್ಬ ಆಸಾಮಿ ತನ್ನನ್ನು ನೋಡಿ ಮರೆ ಮಾಚಿಕೊಳ್ಳಲು ಪ್ರಯತ್ನಿಸಿದ್ದು, ಆತನನ್ನು ವಿಚಾರಿಸಿದಾಗ ಸರಿಯಾದ ಮಾಹಿತಿ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಆಸಾಮಿಯ ಬಳಿ ಇದ್ದ ಕೆಎ.೧೬/ಇ.ಕೆ.೭೬೯೦ ನೇ ಮೋಟಾರ್ ಬೈಕ್‌ನ ದಾಖಲೆಗಳನ್ನು ಕೇಳಿದಾಗ, ಮಾರನೆ ದಿನ ಹಾಜರುಪಡಿಸುವುದಾಗಿ ಹೇಳಿದ್ದು, ಆತನನ್ನು ಚಾಸಾ.೪೫ ರವರ ಸಮ್ಮುಖ ಹಾಜುರಪಡಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ದಿನಾಂಕ ೦೫.೧೦.೨೦೨೫ ರಂದು ಚಾಸಾ.೪೫ ರವರು ಆರೋಪಿ ಬಳಿ ಇದ್ದ ಕೆಎ.೧೬/ಇ.ಕೆ.೭೬೯೦ ನೇ ವಾಹನವು ಮೊಕದ್ದಮೆ ಸಂಖ್ಯೆ ೩೭೭/೨೦೨೫ ಕ್ಕೆ ಸಂಬಂಧಿಸಿದ್ದರಿಂದ ಸದರಿ ಆಸಾಮಿಯನ್ನು ಪತ್ತೆ ಮಾಡಿಕೊಂಡು ತನ್ನನ್ನು ನೇಮಿಸಿದ್ದು, ತಾನು ಆರೋಪಿಯನ್ನು ಬಳ್ಳಾರಿ ರಸ್ತೆಯ ಬಳಿ ಹಿಡಿದು ಚಾಸಾ.೧೨ ರವರ ಮುಂದೆ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ.

16. ತನಿಖಾಧಿಕಾರಿಯಾದ ಪ್ರಾಸಾ.೭ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ ೦೪.೧೦.೨೦೨೫ ರಂದು ಚಾಸಾ.೪೦ ಮತ್ತು ೪೧ ರವರು ಒಬ್ಬ ಆಸಾಮಿಯನ್ನು ಕೆಎ.೧೬/ಇ.ಕೆ.೭೬೯೦ ನೇ ಮೋಟಾರ್ ಬೈಕ್ ನೊಂದಿಗೆ ಠಾಣೆಗೆ ಹಾಜರುಪಡಿಸಿದ್ದು, ಆತನನ್ನು ವಿಚಾರಿಸಿ, ದಿನಾಂಕ ೦೫.೧೦.೨೦೨೫ ರಂದು ಬೆಳಿಗ್ಗೆ ೯.೦೦ ಗಂಟೆಗೆ ಠಾಣೆಗೆ ಹಾಜರಾಗಲು ಆತನಿಗೆ ನೋಟೀಸ್ ನೀಡಿದ್ದು, ದಿನಾಂಕ ೦೫.೧೦.೨೦೨೫ ರಂದು ಆರೋಪಿಯು ಠಾಣೆಗೆ ಹಾಜರಾಗದೇ ಇದ್ದಾಗ ಚಾಸಾ.೪೦ ಮತ್ತು ೪೧ ರವರು ಬೆಳಿಗ್ಗೆ ೧೧.೩೦ ಗಂಟೆಗೆ ಆರೋಪಿಯನ್ನು ಹಿಡಿದು ತನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಆರೋಪಿಯನ್ನು ವಿಚಾರ ಮಾಡಿದಾಗ, ಕೆಎ.೧೬/ಇಎ.೭೬೯೦ ನೇ ಮೋಟಾರ್ ಬೈಕ್ ಮೊಕದ್ದಮೆ ಸಂಖ್ಯೆ ೩೭೭/೨೦೨೫ ಕ್ಕೆ ಸಂಬಂಧಿಸಿದ್ದರಿಂದ ಆರೋಪಿಯ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಮದ್ಯಾಹ್ನ ೧.೪೫ ರಿಂದ ೨.೧೫ ರವರೆಗೆ ಮೋಟಾರ್ ಬೈಕ್‌ನ ಅಮಾನತ್ತು ಪಂಚನಾಮೆ ಜರುಗಿಸಿ, ನಂತರ ಅದೇ ದಿನ ಆರೋಪಿಯು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದ ಮೇರೆಗೆ ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಮದ್ಯಾಹ್ನ ೨.೩೦ ರಿಂದ ೩.೦೦ ಗಂಟೆಯವರೆಗೆ ಸ್ಥಳ ಪಂಚನಾಮೆ ಜರುಗಿಸಿ, ನಂತರ ಆರೋಪಿಯು ತೋರಿಸಿದ ಸ್ಥಳದಲ್ಲಿ ಮಹಜರ್ ಜರುಗಿಸಿ, ಅದೇ ದಿನ ಚಾಸಾ.೪೦ ಮತ್ತು ೪೧ ರವರ ಬೆಂಗಾವಲಿನಲ್ಲಿ ಆರೋಪಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ, ದಿನಾಂಕ ೦೬.೧೦.೨೦೨೫ ರಂದು ಆರೋಪಿಯನ್ನು ಪೋಲೀಸರ ಕಸ್ಟಡಿಗೆ ಪಡೆದು, ಚಾಸಾ.೬ ರಿಂದ ೧೨

ರವರು ಹಾಜರುಪಡಿಸಿದ ಬೈಕ್‌ಗಳನ್ನು ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತುಪುಡಿಸಿಕೊಂಡು, ಚಾಸಾ.೬ ರಿಂದ ೧೨ ರವರ ಹೇಳಿಕೆ ಪಡೆದು, ಆರೋಪಿಯು ಒಟ್ಟು ೩೪ ಬೈಕ್‌ಗಳನ್ನು ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದರಿಂದ ಆತನ ಸ್ವ ಇಚ್ಛಾ ಹೇಳಿಕೆ ಪಡೆದು, ಚಾಸಾ.೧೩ ರಿಂದ ೩೦ ಮತ್ತು ೩೪ ರಿಂದ ೩೬ ರವರಿಗೆ ಅವರ ವಶದಲ್ಲಿದ್ದ ವಾಹನಗಳನ್ನು ಹಾಜರುಪಡಿಸಲು ನೋಟೀಸ್ ನೀಡಿ, ಅವರು ಹಾಜರುಪಡಿಸಿದ ಬೈಕ್‌ಗಳನ್ನು ಅಮಾನತ್ತುಪಡಿಸಿಕೊಂಡು, ಚಾಸಾ.೧ ರವರಿಂದ ಇಂಡಿಮ್ನಿಟಿ ಬಾಂಡ್ ಪಡೆದು ಕೆಎ.೧೬/ಇಕೆ.೭೬೯೦ ನೇ ವಾಹನವನ್ನು ಬಿಡುಗಡೆ ಮಾಡಿ, ವಾಹನ ಬಿಡುಗಡೆ ಪಂಚನಾಮೆ ಜರುಗಿಸಿ, ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿಯುತ್ತಾರೆ.

17. ದೂರುದಾರರು ಯಾರೋ ಚಾಸಾ.೧ ರವರ ವಾಹನವನ್ನು ಕಳವು ಮಾಡಿರುತ್ತಾರೆ ಎಂದು ಹೇಳಿದ್ದು, ಆರೋಪಿಯೇ ವಾಹನವನ್ನು ಕಳವು ಮಾಡಿದ್ದ ಎಂಬುದಾಗಿ ಸ್ಪಷ್ಟವಾಗಿ ಹೇಳಿಲ್ಲ. ಅಭಿಯೋಜನೆ ಪರ ವಿಚಾರಣೆಗೆ ಒಳಪಡಿಸಿರುವ ಸಾಕ್ಷಿದಾರರು ಘಟನೆ ಬಗ್ಗೆ ಪ್ರತ್ಯಕ್ಷ ಸಾಕ್ಷಿದಾರರಾಗಿರುವುದಿಲ್ಲ. ಆರೋಪಿಯೇ ಕಳ್ಳತನ ಮಾಡಿರುತ್ತಾರೆ ಎಂಬುದನ್ನು ಸೂಚಿಸುವ ಯಾವುದೇ ನೇರ ಅಥವಾ ಪರೋಕ್ಷ ಸಾಕ್ಷ್ಯ ಲಭ್ಯವಿಲ್ಲ. ಪ್ರಾಸಾ.೧ ರವರು ಪೋಲೀಸರು ನೀಡಿದ ಮಾಹಿತಿ ಮೇರೆಗೆ ಆರೋಪಿಯೇ ಕಳ್ಳ ಎಂಬ ವಿಚಾರ ಗೊತ್ತಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಪರಾಧ ನ್ಯಾಯ ಶಾಸ್ತ್ರದ ಸ್ಥಿರ ತತ್ವದ ಪ್ರಕಾರ ಅಪರಾದ ನಡೆದಿರುವುದು ಮತ್ತು ಅಪರಾದಿಯನ್ನು ಸಾಬೀತುಪಡಿಸುವುದು ಎರಡು ವಿಭಿನ್ನ ಅಂಶಗಳಾಗಿವೆ. ಕೇವಲ ಅಪರಾಧ ನಡೆದಿದೆ ಎಂಬ ಕಾರಣಕ್ಕೆ ಆರೋಪಿಯನ್ನು ದೋಷಿಯಾಗಿರಿಸಲಾಗುವುದಿಲ್ಲ.

18. ಪ್ರಸ್ತುತ ಪ್ರಕರಣದಲ್ಲಿ ಘಟನೆ ನಡೆದ ೨೧ ದಿನಗಳ ನಂತರ ದೂರು ದಾಖಲಿಸಲಾಗಿರುತ್ತದೆ. ಈ ವಿಳಂಬಕ್ಕೆ ಯಾವುದೇ ಸಮಂಜಸವಾದ ಕಾರಣವನ್ನು ಅಭಿಯೋಜನೆಯವರು ವಿವರಿಸಿಲ್ಲ. ಕಳ್ಳತನದಂತಹ ಪ್ರಕರಣಗಳಲ್ಲಿ ತಕ್ಷಣದ ದೂರು ಅತ್ಯಂತ ಮಹತ್ವದ್ದಾಗಿದೆ. ವಿಳಂಬವು ಅಭಿಯೋಜನೆ ಕಥನದ ಮೇಲೆ ಸಂಶಯವನ್ನು ಉಂಟುಮಾಡುತ್ತದೆ.

19. ಕಳ್ಳತನ ಪ್ರಕರಣದಲ್ಲಿ ಮೊಟ್ಟಮೊದಲ ಬಾರಿಗೆ ಅಭಿಯೋಜನೆಯವರು ಆರೋಪಿಯ ವಶದಿಂದ ಕಳವು ಮಾಲನ್ನು ಜಪ್ತಿಪಡಿಸಿಕೊಂಡಿರುವುದನ್ನು ಸಾಬೀತುಪಡಿಸಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಮಾನತ್ತು ಪಂಚನಾಮೆ ಪಂಚಸಾಕ್ಷಿದಾರರಾದ ಪ್ರಾಸಾ.೩ ಮತ್ತು ೪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಪ್ರಾಸಾ.೪ ರವರು ತಮ್ಮ ಪಾಟೀ ಸವಾಲಿನಲ್ಲಿ "ಜಪ್ತುಪಡಿಸಿಕೊಂಡ ವಾಹನವನ್ನು ಚಾಸಾ.೪೫

ರವರು ಹಾಜರುಪಡಿಸಿರುತ್ತಾರೆ. ಜಪ್ತುಪಡಿಸಿಕೊಂಡ ವಾಹನವನ್ನು ಎಲ್ಲಿಂದ ತರಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ" ಎಂದು ಒಪ್ಪಿಕೊಂಡಿರುವುದರಿಂದ, ಸದರಿಯವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣದ ಮೇಲೆ ನಂಬಿಕೆಯನ್ನು ಹುಟ್ಟಿಸುವಂತಿಲ್ಲ. ಈ ಹೇಳಿಕೆಗಳು ಅಮಾನತ್ತು ಪಂಚನಾಮೆಯ ವಿಷಯಗಳಿಗೆ ವಿರುದ್ಧವಾಗಿವೆ.

20. ಇನ್ನು ದೂರುದಾರರಾದ ಪ್ರಾಸಾ.೧ ರವರು ತಮ್ಮ ಪಾಟೀ ಸವಾಲಿನಲ್ಲಿ "ಕಳ್ಳತನವಾದ ಬೈಕ್ ನನಗೆ ಮೊದಲು ಬೀರೂರಿನಲ್ಲಿ ಸಿಕ್ಕಿರುತ್ತದೆ. ಆರೋಪಿಯನ್ನು ಬೀರೂರಿನಲ್ಲಿ ನೋಡಿರುವುದಿಲ್ಲ. ಬೀರೂರಿನಲ್ಲಿ ರೈಲ್ವೇ ನಿಲ್ದಾಣದ ಪಾರ್ಕಿಂಗ್ ನವರು ನನಗೆ ಬೈಕನ್ನು ನೀಡಿರುತ್ತಾರೆ. ಪೋಲೀಸ್‌ರವರು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಬೈಕನ್ನು ನೀಡಿರುವುದಿಲ್ಲ. ನಂತರ ನಾನು ಚಳ್ಳಕೆರೆ ಠಾಣೆಗೆ ಹೋಗಿ ಬೈಕನ್ನು ಒಪ್ಪಿಸಿರುತ್ತೇನೆ ಎಂದರೆ ಸರಿ. ನಾನು ಬೈಕನ್ನು ಒಪ್ಪಿಸುವಾಗ ಆರೋಪಿಯು ಠಾಣೆಯಲ್ಲಿ ಇರಲಿಲ್ಲ ಎಂದರೆ ಸರಿ" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಎಲ್ಲಾ ಪ್ರಮುಖ ವೈರುದ್ಯಗಳು ಅಭಿಯೋಗ ಸಾಕ್ಷಿದಾರರ ಹೇಳಿಕೆಗಳಲ್ಲಿ ಕಂಡುಬಂದಿದ್ದು, ಆರೋಪಿಯ ವಶದಿಂದ ಕಳವು ಮಾಲನ್ನು ಜಪ್ತುಪಡಿಸಿಕೊಳ್ಳಲಾಗಿದೆ ಎಂಬ ಅಭಿಯೋಜನೆಯ ಹೇಳಿಕೆಗೆ ಗಂಬೀರ ಸಂಶಯ ಉಂಟುಮಾಡುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಅಭಿಯೋಜನೆಯವರು ಅಗತ್ಯವಾದ ಪ್ರಮುಖ ಕೊಂಡಿಯನ್ನು ಸಾಬೀತುಪಡಿಸಲು ವಿಫಲರಾಗಿರುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಡುತ್ತದೆ.

21. ದೂರುದಾರರಾದ ಪ್ರಾಸಾ.೧ ರವರು "ಕಳ್ಳತನ ಮಾಡಿದ ವ್ಯಕ್ತಿಯನ್ನು ಸಿಸಿ ಕ್ಯಾಮೆರಾದ ವಿಡಿಯೋದಲ್ಲಿ ಹಾಗೂ ಠಾಣೆಯಲ್ಲಿ ನೋಡಿರುವುದಾಗಿ ನುಡಿಯುತ್ತಾರೆ" ಪ್ರಾಸಾ.೧ ರವರ ಹೇಳಿಕೆಯ ಪ್ರಕಾರ ಘಟನೆಯು ಸಿ.ಸಿ.ಟಿ.ವಿ. ದೃಶ್ಯಗಳಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಆದಾಗ್ಯೂ ಸದರಿ ಸಿ.ಸಿ.ಟಿ.ವಿ. ದೃಶ್ಯಗಳನ್ನು ನ್ಯಾಯಾಲಯದ ಮುಂದೆ ಸಮರ್ಪಕವಾಗಿ ಪ್ರದರ್ಶಿಸಿ ಸಾಬೀತುಪಡಿಸುವಲ್ಲಿ ತನಿಖಾಧಿಕಾರಿ ವಿಫಲರಾಗಿದ್ದಾರೆ. ಇಂತಹ ನೇರ ಹಾಗೂ ದೃಢೀಕೃತ ಸಾಕ್ಷ್ಯಗಳ ಕೊರತೆ ಅಭಿಯೋಜನೆಯ ಪ್ರಕರಣದ ಮೇಲೆ ಗಂಭೀರ ಸಂಶಯ ಉಂಟುಮಾಡುತ್ತದೆ.

22. ಆರೋಪಿಯು ತನಿಖಾಧಿಕಾರಿಗಳ ಮುಂದೆ ನೀಡಿದ ತಪ್ಪೊಪ್ಪಿಗೆಯ ಆಧಾರದ ಮೇಲೆ ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ಸಲ್ಲಿಸಲಾಗಿರುತ್ತದೆ. ಆರೋಪಿಯು ತನಿಖಾಧಿಕಾರಿಗಳ ಮುಂದೆ ನೀಡಿದ ತಪ್ಪೊಪ್ಪಿಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ ೨೫ ಮತ್ತು ೨೬ ರ ಪ್ರಕಾರ ಕಾನೂನುಬದ್ಧ ಸಾಕ್ಷ್ಯವಾಗದ ಕಾರಣ, ಅದನ್ನು ಆರೋಪಿಯ ದೋಷವನ್ನು ನಿರ್ಣಯಿಸಲು ಬಳಸಲಾಗುವುದಿಲ್ಲ. ಇದಲ್ಲದೆ, ಕಲಂ ೨೭ ರ ಅಡಿಯಲ್ಲಿ ಹೇಳಿಕೆಯ ಆಧಾರದಲ್ಲಿ ಆರೋಪಿಯು ವಾಹನವನ್ನು ಕಳವು ಮಾಡಲು ಉಪಯೋಗಿಸಿದ ಬೈಕ್ ಕೀ ಪತ್ತೆಯಾಗಿರುವುದಾಗಿ

ಈ ಪ್ರಕರಣದಲ್ಲಿ ದಾಖಲೆ ಇಲ್ಲ. ಆರೋಪಿಯು ತನಿಖೆಯ ಸಮಯದಲ್ಲಿ ಸ್ಥಳವನ್ನು ತೋರಿಸಿದ್ದಾರೆ ಎಂಬುದರ ಆಧಾರದಲ್ಲಿ ಅಪರಾಧ ಸಾಬೀತಾಗುವುದಿಲ್ಲ. ಅತ್ಯಂತ ಪ್ರಮುಖವಾಗಿ, ವಾಹನವನ್ನು ಚಾಲನೆ ಮಾಡಲು ಉಪಯೋಗಿಸಿದ ಯಾವುದೇ ಸಾಧನವನ್ನು ಈ ಪ್ರಕರಣದಲ್ಲಿ ಜಪ್ತಿ ಮಾಡಲಾಗಿದೆ ಎಂಬುದಾಗಿ ಮಹಜರ್ ಸಾಕ್ಷಿಗಳಾಗಲೀ ಅಥವಾ ತನಿಖಾಧಿಕಾರಿಯಾಗಲಿ ಯಾವುದೇ ಸಾಕ್ಷಿಯನ್ನು ನೀಡಿಲ್ಲ. ಪ್ರಾಸಾ.೧ ರವರು ತಮ್ಮ ಪಾಟೀ ಸವಾಲಿನಲ್ಲಿ "ಬೈಕಿನ ಇಂಟರ್‌ಲಾಕ್ ಮುರಿದಿರುವುದಿಲ್ಲ" ಎಂದು ತಿಳಿಸಿದ್ದಾರೆ. ಈ ಹೇಳಿಕೆ ಮಹತ್ವದ್ದಾಗಿದೆ. ಏಕೆಂದರೆ ವಾಹನವನ್ನು ಕಳವು ಮಾಡಲು ಸಾಮಾನ್ಯವಾಗಿ ಲಾಕ್ ವ್ಯವಸ್ಥೆಯನ್ನು ಹಾನಿಗೊಳಪಡಿಸುವುದು ನಿರೀಕ್ಷಿತವಾಗಿದೆ. ಆದಾಗ್ಯೂ, ಆರೋಪಿಯು ಯಾವ ರೀತಿಯಲ್ಲಿ ವಾಹನವನ್ನು ಕಳವು ಮಾಡಿದನು ಹಾಗೂ ಯಾವ ಸಾಧನವನ್ನು ಬಳಸಿಕೊಂಡು ಬೈಕನ್ನು ಚಾಲನೆಗೆ ತಂದನು ಎಂಬುದರ ಕುರಿತು ಅಭಿಯೋಗ ಪಕ್ಷವು ಯಾವುದೇ ಸ್ಪಷ್ಟ ಹಾಗೂ ನಂಬಲರ್ಹ ಸಾಕ್ಷ್ಯವನ್ನು ನೀಡಿಲ್ಲ. ಈ ಸಂಬಂಧ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದು ಸಾಬೀತಾಗಿಲ್ಲ. ಇದರಿಂದ ಆರೋಪಿಯ ವಿರುದ್ಧದ ಆರೋಪವನ್ನು ದೃಢಪಡಿಸುವ ಪ್ರಮುಖ ಅಂಶಗಳನ್ನು ಅಭಿಯೋಜನೆಯವರು ಸಾಬೀತುಪಡಿಸಲು ವಿಫಲವಾಗಿದೆ. ಈ ಕೊರತೆ ಪ್ರಕರಣದ ಮೂಲಭೂತ ಸ್ವರೂಪದ ಮೇಲೆಯೇ ಗಂಬೀರ ಸಂಶಯವನ್ನು ಉಂಟುಮಾಡುತ್ತದೆ. ಹಾಗಾಗಿ ಅಭಿಯೋಜನೆಯ ಪ್ರಕರಣದ ಮೇಲೆ ಸಂಶಯ ಉದ್ಭವವಾಗುತ್ತದೆ. ಹಾಗೂ ಅಭಿಯೋಜನೆಯ ಪ್ರಕರಣವು ಸಂಪೂರ್ಣವಾಗಿ ಅಪೂರ್ಣ ಸಾಂದರ್ಬಿಕ ಸಾಕ್ಷ್ಯಗಳ ಮೇಲೆ ನಿಂತಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ, ಅಭಿಯೋಜನೆಯು ಆರೋಪಿಯ ವಿರುದ್ಧದ ಆರೋಪವನ್ನು ಸಂದೇಹಾತೀತವಾಗಿ ಸಾಬೀತುಪಡಿಸಲು ವಿಫಲವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಅಪರಾಧಿಕ ತತ್ವಗಳ ಪ್ರಕಾರ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯ ಪ್ರಕರಣಗಳ ಮೇಲೆ ಸಂಶಯ ಉದ್ಭವಿಸಿದರೆ ಸದರಿ ಸಂಶಯದ ಲಾಭ ಆರೋಪಿತರಿಗೆ ನೀಡಬೇಕೆಂದು ಇರುತ್ತದೆ. ಈ ಕಾರಣಗಳಿಂದಾಗಿ ಅಂಶ ೧ ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

23. <u>ಅಂಶ ನಂ.೨</u>– ಮೇಲೆ ಮಾಡಲಾದ ವಿವರವಾದ ಚರ್ಚೆ ಹಾಗೂ ಕಾರಣಗಳಿಂದ ಈ ಕೆಳಕಂಡಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆ:–

**<u>ಆ ದೇ ಶ</u>**

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ ೨೮೧(೧) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ನ್ಯಾಯ

ಸಂಹಿತೆ ಕಲಂ ೩೦೩(೨) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ ೪೮೧(೧) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ೬ ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು ಎಂದು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿದ ನಂತರ, ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ ದಿನಾಂಕಃ 02 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಹೇಮಾ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

**ಅನುಬಂಧ**

1) ಅಭಿಯೋಜನಾ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಃ-

| | | |
|---|---|---|
| ಪ್ರಾಸಾ.1 | : | ಸಿರಿಯಣ್ಣ |
| ಪ್ರಾಸಾ.2 | : | ಜ್ಞಾನೇಶ |
| ಪ್ರಾಸಾ.3 | : | ಮೋಹನ್ |
| ಪ್ರಾಸಾ.4 | : | ಅಕ್ಬರ್ ಅಹಮ್ಮದ್ |
| ಪ್ರಾಸಾ.5 | : | ವೆಂಕಟೇಶ್ ಕೆ. |
| ಪ್ರಾಸಾ.6 | : | ಶ್ರೀಧರ್ ವಸಂತ್ ಧರೆಣ್ಣನವರ್ |
| ಪ್ರಾಸಾ.7 | : | ಈರೇಶ್ |

2) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ದಾಖಲಾತಿಗಳುಃ-

| | |
|---|---|
| ನಿಪಿ.1 | : ದೂರು |
| ನಿಪಿ.1(ಎ ಮತ್ತು ಬಿ) | : ಸಾಕ್ಷಿ ಸಹಿ |
| ನಿಪಿ.2 | : ಸ್ಥಳ ಪಂಚನಾಮೆ |
| ನಿಪಿ.2(ಎ ರಿಂದ ಸಿ) | : ಸಾಕ್ಷಿ ಸಹಿ |
| ನಿಪಿ.3 | : ಭಾವಚಿತ್ರ |
| ನಿಪಿ.4 | : ವಾಹನ ಬಿಡುಗಡೆ ಪಂಚನಾಮೆ |
| ನಿಪಿ.4(ಎ & ಬಿ) | : ಸಾಕ್ಷಿ ಸಹಿ |
| ನಿಪಿ.5 & 6 | : ಭಾವಚಿತ್ರಗಳು |
| ನಿಪಿ.7 | : ಅಮಾನತ್ತು ಪಂಚನಾಮೆ |
| ನಿಪಿ.7(ಎ ರಿಂದ ಸಿ) | : ಸಾಕ್ಷಿ ಸಹಿ |
| ನಿಪಿ.8 | : ಪ್ರಥಮ ವರ್ತಮಾನ ವರದಿ |
| ನಿಪಿ.8(ಎ) | : ಸಾಕ್ಷಿ ಸಹಿ |
| ನಿಪಿ.9 | : ಆರೋಪಿಯ ಸ್ವ ಇಚ್ಛಾ ಹೇಳಿಕೆ |
| ನಿಪಿ.9(ಎ) | : ಸಾಕ್ಷಿ ಸಹಿ |
| ನಿಪಿ.10 | : ಬಿ.ಎಸ್.ಎ. ಕಲಂ ೬೩(೪) ರಡಿಯಲ್ಲಿ ಪ್ರಮಾಣ ಪತ್ರ |

ನಿಪಿ.11 : ಸಿ.ಡಿ.

3) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ಮುದ್ದೆಮಾಲುಃ

–ಃ ಇಲ್ಲಾ ಃ–

4) ಆರೋಪಿ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ಗುರುತಿಸಲಾಗಿದ ದಾಖಲಾತಿಗಳ

–ಃ ಇಲ್ಲಾ ಃ–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.